ದಿನಾಂಕ ಃ **13-11-2018** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಬಿ.ಆರ್.ಎ ಪ್ರತಿವಾದಿ ಪರ ವಕೀಲರಿಂದಃ

1 ನೇ ಪ್ರತಿವಾದಿ ನನ್ನ ಹಿರಿಯ ಅಣ್ಣ. ನನ್ನ ತಂದೆ ಇದ್ದಾಗ ವಿಭಾಗ ಆಗಿಲ್ಲ ಎಂದರೆ ಹೌದು. ನನ್ನ ತಂದೆ ಜೀವಂತ ಇರುವ ವರೆಗೆ ನನ್ನ ತಂದೆಯೇ ಮನೆಯ ಹಿರೆತನ ಮಾಡುತ್ತಾ ಇದ್ದರು. ದಾವಾ ಶೇಡುಲ್ ಐಟಮ ನಂ 5 ರಿಂದ 7 ಮನೆ ಹಾಗೂ ಸೈಟಗಳ ನನ್ನ ತಂದೆ ತೀರಿಕೊಂಡ ನಂತರ ಖರೀದಿ ಆಗಿರುವ ಆಸ್ತಿ ಎಂದರೆ ಹೌದು. ದಾವಾ ಜಮೀನಗಳು ನನ್ನ ತಂದೆ ಇದ್ದಾಗಲೇ ಇದ್ದ ಜಮೀನುಗಳು ಎಂದರೆ ಹೌದು. ನನ್ನ ತಂದೆ ತೀರಿಕೊಂಡ ನಂತರ ದಾವಾ ಜಮೀನಗಳು ಯಾರ ಹೆಸರಿನಲ್ಲಿ ಬರುತ್ತಾ ಇದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ತೀರಿಕೊಂಡ ನಂತರ ಮನೆಯ ಹಿರೆತನ 1 ಮತ್ತು 2 ನೇ ಪ್ರತಿವಾದಿಯರು ಮಾಡಲು ಶುರು ಮಾಡಿದರು. ಸಾಮಾನ್ಯವಾಗಿ ಹಳ್ಳಿಯಲ್ಲಿ ತಂದೆ ತೀರಿಕೊಂಡ ನಂತರ ಹಿರಿಮಗ ಮನೆಯ ಹಿರೆತನ ಮಾಡುತ್ತಾರೆ ಎಂದರೆ ನನಗೆ ಆ ಬಗ್ಗೆ ಮಾಹಿತಿ ಇಲ್ಲ. ದಾವಾ ಹೂಡುವಾ ಜಮೀನಿನ ಉತಾರ ನೋಡಿದ್ದಿರಾ ಎಂದರೆ ಸಾಕ್ಷಿ ನನ್ನ ಮಕ್ಕಳು ನೋಡಿದ್ದಾರೆ ಎಂದು ಹೇಳುತ್ತಾರೆ.

1 ನೇ ಪ್ರತಿವಾದಿಗೆ 5 ರಿಂದ 7 ನೇ ಪ್ರತಿವಾದಿ ಗಂಡು ಮಕ್ಕಳು ಎಂದರೆ ಹೌದು. 5 ನೇ ಪ್ರತಿವಾದಿ **Army** ಯಲ್ಲಿ ಕೆಲಸ ಮಾಡುತ್ತಾರೆ ಎಂದರೆ ಹೌದು. 5 ನೇ ಪ್ರತಿವಾದಿ ನೌಕರಿಗೆ ಸೇರಿ ಬಹಳ ವರ್ಷ ಆಯಿತು ಎಂದರೆ ಹೌದು. 2 ನೇ ಪ್ರತಿವಾದಿಗೆ 3 ಮತ್ತು 4 ನೇ ಪ್ರತಿವಾದಿ ಮಕ್ಕಳು ಎಂದರೆ ಹೌದು. ಪ್ರತಿವಾದ ಪತ್ರದ 4 ನೇ ಪೇಜ್ 9 ನೇ ಪ್ಯಾರಾ(1) ರಲ್ಲಿ ಕಾಣಿಸಿರುವ ಆಸ್ತಿ ನನ್ನ ಹೆಸರಿನಲ್ಲಿ ಇದೆ ಹಾಗೂ ನನ್ನ ಸ್ವಾಧೀನದಲ್ಲಿ ಇದೆ ಎಂದರೆ ಸಾಕ್ಷಿ ನನಗೆ ಏನು ಗೊತ್ತು ಅವರು ಏನು ಮಾಡಿದ್ದಾರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಪ್ರತಿವಾದ ಪತ್ರದ 5 ನೇ ಪೇಜ್ 9 ನೇ ಪ್ಯಾರಾ(2) ರಲ್ಲಿ ಕಾಣಿಸಿರುವ ಆಸ್ತಿ 2 ನೇ ಪ್ರತಿವಾದಿ ಹೆಸರಿನಲ್ಲಿ ಹಾಗೂ ಸ್ವಾಧೀನದಲ್ಲಿ ಇದೆ

ಎಂದರೆ ಸಾಕ್ಷಿ ನನಗೆ ಏನು ಗೊತ್ತು ಅವರು ಏನು ಮಾಡಿದ್ದಾರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಪ್ರತಿವಾದ ಪತ್ರದ 5 ನೇ ಪೇಜ್ 9 ನೇ ಪ್ಯಾರಾ(3) ರಲ್ಲಿ ಕಾಣಿಸಿರುವ ಆಸ್ತಿ 1 ನೇ ಪ್ರತಿವಾದಿ ಹೆಸರಿನಲ್ಲಿ ಹಾಗೂ ಸ್ವಾಧೀನದಲ್ಲಿ ಇದೆ ಎಂದರೆ ಸಾಕ್ಷಿ ನನಗೆ ಏನು ಗೊತ್ತು ಅವರು ಏನು ಮಾಡಿದ್ದಾರೆ ನನಗೆ ಗೊತ್ತಿಲ್ಲ ಹಾಗೂ ಅವರು ಹೇಗೆ ಬೇಕು ಹಾಗೇ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ. ದಾವಾ ಜಮೀನಗಳು ಮದನಭಾವಿ ಸರಹದ್ದಿನಲ್ಲಿ ಇವೆ ಎಂದರೆ ಹೌದು. ದಾವಾ ಐಟಂ ನಂ 6 ಜಮೀನಿನಲ್ಲಿ ಒಂದು ಫಾರ್ಮ ಹೌಸ್ ಇದೆ ಎಂದರೆ ಹೌದು. ಆ ಫಾರ್ಮ ಹೌಸ್ ಗೆ ನಂ 340 ಎಂದು ಇದೆ ಎಂದರೆ ಸಾಕ್ಷಿ ಅವರು ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಗ್ರಾಮ ಪಂಚಾಯತಿ ನಂ 237 ಇದು ನಮ್ಮ ಪಿತ್ರಾರ್ಜಿತ ಮನೆ ಎಂದರೆ ಹೌದು. ನನ್ನ ತಂದೆ ಇದ್ದಾಗ ಪಂಚಾಯತಿಯಲ್ಲಿ ಆ ಮನೆಗೆ ಕೇವಲ 237 ಅಂತಾ ಮಾತ್ರ ನಂಬರ ಕೊಟ್ಟಿದ್ದರು ಎಂದರೆ ಸಾಕ್ಷಿ ನಾನು ಶಾಲೆ ಕಲಿತಿಲ್ಲ ಎಂದು ಹೇಳುತ್ತಾರೆ. ದಾವಾ ಹೂಡುವ ಕಾಲಕ್ಕೆ ಮನೆ ನಂಬರ 237 ಗೆ ಗ್ರಾಮ ಪಂಚಾಯತಿ ಇವರು 237 ಎ,ಬಿ,ಸಿ ಅಂತಾ ನಂಬರ ಕೊಟ್ಟಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. 237 ಎ, 1 ನೇ ಪ್ರತಿವಾದಿ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿ ಅವರು ಹಾಗೇ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ. 237 ಬಿ, ನನ್ನ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿ ಅವರು ಹಾಗೇ ಮಾಡಿದ್ದಾರೆ ಎಂದು ಹೇಳುತ್ತಾರೆ. 237 ಸಿ, 2 ನೇ ಪ್ರತಿವಾದಿ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿ ಅವರು ಹಾಗೇ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ. 1982 ರಿಂದ ನನ್ನ , 1 ಮತ್ತು 2 ನೇ ಪ್ರತಿವಾದಿಯರ ಹೆಸರಿನಲ್ಲಿ ಮೇಲೆ ಹೇಳಿದ ಪ್ರಕಾರ ಆಸ್ತಿಗಳು ದಾಖಲಾತಿಯಲ್ಲಿ ಬರುತ್ತಾ ಇದೆ ಎಂದರೆ ಸರಿಯಲ್ಲ. ನನ್ನ ತಂದೆ ತೀರಿಕೊಂಡ ನಂತರ ಹೆಣ್ಣು ಮಕ್ಕಳಲ್ಲಿ ಹೊಂದಾಣಿಕೆ ಬರದೇ ಇರುವುದರಿಂದ 1982 ರಲ್ಲಿ ನಾವು ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಾನು ವಾಸ ಮಾಡುವ ಮನೆ ನಂ 237 ಬಿ, ಎಂದರೆ ಸಾಕ್ಷಿ ಅವರು ಮಾಡಿಸಿರಬಹುದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಮನೆ ನಂ 237 ಸಿ, 2 ನೇ ಪ್ರತಿವಾದಿ ವಾಸ ಇದ್ದರೆ ಎಂದರೆ ಸಾಕ್ಷಿ

ಅವರು ಏನು ಮಾಡಿಕೊಂಡಿದ್ದಾರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಮನೆ ನಂ 237 ಎ, 1 ನೇ ಪ್ರತಿವಾದಿ ವಾಸ ಇದ್ದರೆ ಎಂದರೆ ಸಾಕ್ಷಿ ಅವರು ಏನು ಮಾಡಿಕೊಂಡಿದ್ದಾರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. 1982 ನಂತರ ತಹಶೀಲ್ದಾರ ಕಚೇರಿಯಲ್ಲಿ ನಾನು, 1 ಮತ್ತು 2 ನೇ ಪ್ರತಿವಾದಿಯರು ನಮ್ಮ ನಮ್ಮಗಳ ಹೆಸರಿಗೆ ದಾಖಲಾತಿ ಮಾಡಿಕೊಡಿ ಅಂತಾ ಜಂಟಿಯಾಗಿ ಅರ್ಜಿಯನ್ನು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ನಾವು ನೀಡಿದ ಅರ್ಜಿಯಂತೆ ತಹಶೀಲ್ದಾರ ರವರು ನಂಬರ 3047 ರಂತೆ ಹಕ್ಕು ದಾಖಲೆ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಡೈರಿ ನಂ 3047 ಸರಿ ಇಲ್ಲ ಅಂತಾ ಹಾಗೂ ನಾನು ಸಹಿ ಮಾಡಿಲ್ಲ ಅಂತಾ ಎಲ್ಲಿಯಾ ಸಹ ಮೇಲ್ಮನವಿ ಸಲ್ಲಿಸಿಲ್ಲ. ನಾನು , 1 ಮತ್ತು 2 ನೇ ಪ್ರತಿವಾದಿಯರು 3 ಜನ ಸೇರಿ ಮನೆ ನಂ 237 ನ್ನು ಎ,ಬಿ,ಸಿ ಅಂತಾ ಮಾಡಿಕೊಡಿ ಅಂತಾ ಅರ್ಜಿ ಕೊಟ್ಟಿದ್ದೇವೆ ಎಂದರೆ ಸಾಕ್ಷಿ ನಾನು ಅರ್ಜಿ ಕೊಟ್ಟಿಲ್ಲ ಅವರು ಏನು ಮಾಡಿದ್ದಾರೆ ನನಗೆ ಗೊತ್ತಿಲ್ಲ. ಮನೆ ನಂ 237 ಬಿ ನನ್ನ ಒಬ್ಬನ ಹೆಸರಿನಲ್ಲಿ ಮಾತ್ರ ಇದೆ ಅದು ತಪ್ಪು ಅಂತಾ ನಾನು ಎಲ್ಲಿಯೂ ಸಹ ಪ್ರಶ್ನಿಸಿಲ್ಲ ಎಂದರೆ ಅದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ತಹಶೀಲ್ದಾರ ಇವರ ಬಳಿ ವರದಿ ಅರ್ಜಿಗೆ ನಾನೇ ಸಹಿ ಮಾಡಿದ್ದರು ಸಹ ಸಹಿ ಮಾಡಿಲ್ಲ ಅಂತಾ ಸುಳ್ಳು ಹೇಳುತ್ತಾ ಇದ್ದೇನೆ ಎಂದರೆ ಸರಿಯಲ್ಲ. ಪಂಚಾಯತಿಯಲ್ಲೂ ಸಹ ವರದಿಗೆ ನಾನು ಸಹಿ ಮಾಡಿದ್ದರು ಸಹ ಸಹಿ ಮಾಡಿಲ್ಲ ಅಂತಾ ಸುಳ್ಳು ಹೇಳುತ್ತಾ ಇದ್ದೇನೆ ಎಂದರೆ ಸರಿಯಲ್ಲ. 1982 ರಲ್ಲಿ ವಿಭಾಗ ಆಗಿದ್ದರೂ ಸಹ ಅದು ಸರಿಯಿಲ್ಲ ಅಂತಾ ಪ್ರಶ್ನಿಸಿಲ್ಲ ಎಂದರೆ ಸಾಕ್ಷಿ ನನಗೆ ಏನೂ ಗೊತ್ತಿಲ್ಲ ಎಂದು ಹೇಳುತ್ತಾರೆ.

ದಾವಾ ಐಟಂ ನಂ 7 ನೇಸರಗಿಯಲ್ಲಿ ಇರುವ ಪ್ಲಾಟ ಯಾರ ಹೆಸರಿನಲ್ಲಿ ಇದೆ ನನಗೆ ಮಾಹಿತಿ ಇಲ್ಲ. ಸದರಿ ಪ್ಲಾಟ ಕೂಡಿ ಇದ್ದಾಗ ಖರೀದಿ ಆಗಿದೆ. ಯಾರ ಹೆಸರಿನಲ್ಲಿ ಖರೀದಿ ಆಗಿದೆ ಮಾಹಿತಿ ಇಲ್ಲ. ನಾನು ಹಾಗೂ ನನ್ನ ಸಹೋದರರು ಕೂಡಿ ಇದ್ದಾಗ ಸದರಿ ಆಸ್ತಿ ಖರೀದಿ ಆಗಿರುವ ಬಗ್ಗೆ ದಾಖಲಾತಿ ಇದೆಯಾ ಎಂದರೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ಸದರಿ ಆಸ್ತಿಗೆ ನನ್ನ ಹೆಸರು

ಸಹ ಹಚ್ಚಿ ಅಂತಾ ಅರ್ಜಿ ಏನಾದರೂ ಕೊಟ್ಟಿದ್ದಿರಾ ಎಂದರೆ ಸಾಕ್ಷಿ ನನಗೆ ಅವರು ಕರೆದಿಲ್ಲ ಎಂದು ಹೇಳುತ್ತಾರೆ. ಸದರಿ ಆಸ್ತಿ ವಿಭಾಗ ಆದ ನಂತರ 2 ನೇ ಪ್ರತಿವಾದಿ ಸ್ವಂತವಾಗಿ ಖರೀದಿ ಮಾಡಿರುವ ಆಸ್ತಿ ಎಂದರೆ ಸುಳ್ಳು. ಸದರಿ ಆಸ್ತಿ ಖರೀದಿ ಮಾಡುವ ಕಾಲಕ್ಕೆ ನಮ್ಮ ಕುಟುಂಬ ಒಟ್ಟು ಕುಟುಂಬ ಆಗಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿ ಖರೀದಿ ಆದ ದಿನದಿಂದ ಇಲ್ಲಿಯ ತನಕ 2 ನೇ ಪ್ರತಿವಾದಿ ಮತ್ತು ಆತನ ಮಕ್ಕಳು ಮಾತ್ರ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸಾಕ್ಷಿ ನಾನು ಹಿರೆತನ ಮಾಡಿಲ್ಲ ಅವರು ಮಾಡುತ್ತಾರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಿದೆ

(ಚೈತ್ರಾ ಎ. ಎಮ್.)
ಪ್ರ ದ ನ್ಯಾ ದಂ, ಬೈಲಹೊಂಗಲ